**ಮಾನ್ಯ ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೇಶವ ಪ್ರಸಾದ್, ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯದ ಕುರಿತು.**

**ವಿಷಯ:**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಾಸ್ಟೆಲ್‌ನಲ್ಲಿರುವ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವರ್ಷದ ಶುಚಿ ಸಂಭ್ರಮ ಕಿಟ್‌ಗಳನ್ನು ವಿತರಿಸದಿರುವ ಬಗ್ಗೆ.

**ಉತ್ತರ:**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಒಟ್ಟು 2443 ವಿದ್ಯಾರ್ಥಿ ನಿಲಯಗಳು ಕಾರ್ಯ ನಿರ್ವಹಿಸುತ್ತಿದ್ದು, ಈ ನಿಲಯಗಳಲ್ಲಿ 2,28,411 ವಿದ್ಯಾರ್ಥಿಗಳ ಪ್ರವೇಶಾತಿಗೆ ಅವಕಾಶ ಕಲ್ಪಿಸಲಾಗಿದೆ. ಸದರಿ ನಿಲಯ ಮತ್ತು ಶಾಲೆಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸ್ವಚ್ಛತೆಯ ಉಪಯೋಗಕ್ಕಾಗಿ ಈ ಕೆಳಕಂಡಂತೆ ನಿರ್ಮಲ ಕಿಟ್ ಹಾಗೂ ಸಿರಿಗಂಧ ಕಿಟ್ಟುಗಳನ್ನು ಅವುಗಳ ಮುಂದೆ ನಮೂದಿಸಿರುವ ವೆಚ್ಚದ ಮಿತಿಯೊಳಗೆ ನೀಡಲಾಗುತ್ತಿದೆ.

(ರೂ.ಗಳಲ್ಲಿ)

| ಕ್ರ. ಸಂ | ಉತ್ಪನ್ನಗಳ ವಿವರ | ಪರಿಮಾಣ | ಸರಬರಾಜು ದರ | |
|---|---|---|---|---|
| | | | ನಿರ್ಮಲ ಕಿಟ್ (ಬಾಲಕರು) | ಸಿರಿಗಂಧ ಕಿಟ್ (ಬಾಲಕಿಯರು) |
| 1 | ಮೈಸೂರು ಸ್ಯಾಂಡಲ್ ಸೋಪ್ಸ್- 125 ಗ್ರಾಂ | 01 | 54.00 | 54.00 |
| 2 | ಮೈಸೂರು ಸ್ಯಾಂಡಲ್ ಡಿಟರ್ಜೆಂಟ್ಸ್ ಕೇಕ್ – 150 ಗ್ರಾಂ | 02 | 19.00 | 19.00 |
| 3 | ಮೈಸೂರು ಸ್ಯಾಂಡಲ್ ಕೊಬ್ಬರಿ ಎಣ್ಣೆ – 100 ಗ್ರಾಂ | 01 | 27.00 | 27.00 |
| 4 | ಮೈಸೂರು ಸ್ಯಾಂಡಲ್ ಟಾಲ್ಕಂ ಪೌಡರ್ – 50 ಗ್ರಾಂ | 01 | - | 18.00 |
| 5 | ಟೂತ್ ಪೇಸ್ಟ್ – 100 ಗ್ರಾಂ | 01 | 25.00 | 25.00 |
| 6 | ಟೂತ್ ಬ್ರಷ್ (3 ತಿಂಗಳಿಗೊಮ್ಮೆ) | 01 | 13.00 | 13.00 |
| | **ಒಟ್ಟು (ಬ್ರಷ್ ಹೊರತುಪಡಿಸಿ)** | | **ರೂ.125.00** | **ರೂ.143.00** |

- ವಸತಿ ನಿಲಯದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಊಟ, ವಸತಿಯೊಂದಿಗೆ ಇತರೆ ಅಗತ್ಯ ಸವಲತ್ತುಗಳಾದ ಹಾಸಿಗೆ-ಹೊದಿಕೆ, ಗ್ರಂಥಾಲಯ ಹಾಗೂ ಶುಚಿ ಸಂಭ್ರಮ ಕಿಟ್‌ಗಳನ್ನು ನೀಡಲಾಗುತ್ತಿದೆ.

- ಶುಚಿ ಸಂಭ್ರಮ ಕಿಟ್‌ಗಳನ್ನು ಕರ್ನಾಟಕ ಸೋಪ್ಸ್ ಆಂಡ್ ಡಿಟರ್ಜೆಂಟ್ಸ್ ಲಿಮಿಟೆಡ್ ಸಂಸ್ಥೆಯಿಂದ ಪೂರೈಸಲಾಗುತ್ತಿದ್ದು, ನಿಲಯದ ಪ್ರತಿ ಬಾಲಕ/ಬಾಲಕಿಯರಿಗೆ ಮಾಹೆಯಾನ ಒಂದು ಕಿಟ್ ಪೂರೈಸಲಾಗುತ್ತಿದೆ.

15



- ಬಾಲಕರಿಗೆ ಪೂರೈಸಲಾಗುವ (ನಿರ್ಮಲ ಕಿಟ್) ಪ್ರತಿ ಕಿಟ್‌ನ ಬೆಲೆ ರೂ.125/- ಇದ್ದು, ಈ ಕಿಟ್‌ನಲ್ಲಿ 125ಗ್ರಾಂನ ಒಂದು ಮೈಸೂರು ಸ್ಯಾಂಡಲ್ ಸೋಪ್, 150 ಗ್ರಾಂನ ಎರಡು ಡಿಟರ್ಜೆಂಟ್ ಕೇಕ್, 100 ಗ್ರಾಂ ಕೊಬ್ಬರಿ ಎಣ್ಣೆ, 100 ಗ್ರಾಂನ ಒಂದು ಟೂತ್ ಪೇಷ್ಟ್ ಹಾಗೂ ಒಂದು ಟೂತ್ ಬ್ರಷ್ (3 ತಿಂಗಳಿಗೊಮ್ಮೆ) ಇರುತ್ತದೆ. ಇದೇ ರೀತಿ ಬಾಲಕಿಯರಿಗೆ ಪೂರೈಸಲಾಗುವ (ಸಿರಿಗಂಧ ಕಿಟ್) ಪ್ರತಿ ಕಿಟ್‌ನ ಬೆಲೆ ರೂ.143/- ಇದ್ದು, ಈ ಕಿಟ್‌ನಲ್ಲಿ 125ಗ್ರಾಂನ ಒಂದು ಮೈಸೂರು ಸ್ಯಾಂಡಲ್ ಸೋಪ್, 150 ಗ್ರಾಂ ನ ಎರಡು ಡಿಟರ್ಜೆಂಟ್ ಕೇಕ್, 100ಗ್ರಾಂ ಕೊಬ್ಬರಿ ಎಣ್ಣೆ , ಮೈಸೂರು ಸ್ಯಾಂಡಲ್ ಟಾಲ್ಕಂ ಪೌಡರ್, 100ಗ್ರಾಂ ನ ಒಂದು ಟೂತ್ ಪೇಷ್ಟ್ ಹಾಗೂ ಒಂದು ಟೂತ್ ಬ್ರಷ್(3 ತಿಂಗಳಿಗೊಮ್ಮೆ) ಇರುತ್ತದೆ.

- 2023-24 ನೇ ಸಾಲಿನಲ್ಲಿ ಕರ್ನಾಟಕ ಸೋಪ್ಸ್ ಆಂಡ್ ಡಿಟರ್ಜೆಂಟ್ಸ್ ಲಿಮಿಟೆಡ್ ಸಂಸ್ಥೆಯಿಂದ ಶುಚಿ ಸಂಭ್ರಮ ಕಿಟ್‌ನ್ನು ಖರೀದಿ ಮಾಡುವ ಸಂಬಂಧ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿರುವಂತೆ ಇಲ್ಲಿಯ ವರಗೆ ನೀಡಲಾಗುತ್ತಿದ್ದ ಮೈಸೂರು ಸ್ಯಾಂಡಲ್ ಸೋಪ್‌ನ್ನು ಪ್ರತಿ ವಿದ್ಯಾರ್ಥಿಗೆ 75ಗ್ರಾಂ ನಿಂದ 125 ಗ್ರಾಂ ಗೆ ಹೆಚ್ಚಿಸುವುದು ಹಾಗೂ ಟೂತ್ ಪೇಷ್ಟನ್ನು 50ಗ್ರಾಂ ನಿಂದ 100ಗ್ರಾಂಗೆ ಹೆಚ್ಚಿಸಿ ನೀಡುವಂತೆ ಆದೇಶಿಸಲಾಗಿರುತ್ತದೆ. ಅದರಂತೆ 4(ಜಿ) ವಿನಾಯಿತಿಯನ್ನು ಆರ್ಥಿಕ ಇಲಾಖೆಯಿಂದ ಪಡೆಯಲು ತಡವಾಗಿರುತ್ತದೆ. ಆರ್ಥಿಕ ಇಲಾಖೆಯು ದಿನಾಂಕ:17-10-2023ರಂದು 4(ಜಿ) ವಿನಾಯಿತಿಯ ಅನುಮತಿ ನೀಡಿರುತ್ತದೆ. ಅದರನ್ವಯ ಶುಚಿ ಸಂಭ್ರಮ ಕಿಟ್ ಪೂರೈಸಲು ದಿನಾಂಕ:27-10-2023ರಂದು ಸರ್ಕಾರದ ಆದೇಶ ಹೊರಡಿಸಲಾಗಿರುತ್ತದೆ.

ನವೆಂಬರ್-2023ರ ಅಂತ್ಯದವರೆಗೆ, ರಾಜ್ಯದ 68 ತಾಲ್ಲೂಕುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಿಗೆ ಶುಚಿ ಸಂಭ್ರಮ ಕಿಟ್‌ಗಳನ್ನು ಕರ್ನಾಟಕ ಸೋಪ್ಸ್ ಆಂಡ್ ಡಿಟರ್ಜೆಂಟ್ಸ್ ಲಿಮಿಟೆಡ್ ಸಂಸ್ಥೆಯು ಪೂರೈಸಿದ್ದು, ಡಿಸೆಂಬರ್ ಅಂತ್ಯದೊಳಗೆ ರಾಜ್ಯದ ಎಲ್ಲಾ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಶುಚಿ ಸಂಭ್ರಮ ಕಿಟ್‌ಗಳನ್ನು ಪೂರೈಸಲು ಕ್ರಮವಹಿಸಲಾಗುವುದು.

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.